ಬದುಕುತ್ತಿರಲಿಲ್ಲ. ಈ ಉಪಕಾರಕ್ಕಾಗಿ ನಿಮಗೆ ಏನು ಪ್ರತಿಫಲ ಬೇಕೆಂದು ಸಂಕೋಚವಿಲ್ಲದೆ ಕೇಳಿ' ಎಂದು ಉದಾರವಾಗಿ ಹೇಳಿದ.

ಆಗ ಆ ಹಕ್ಕಿಗಳಿಗೆ ರಾಜನಾಗಿದ್ದ ದೊಡ್ಡ ಹಕ್ಕಿಯು ಮಾತನಾಡುತ್ತ, 'ದೊರೆಯೇ, ಖಂಡಿತ ನೀನು ನಾವು ಕೇಳಿದುದನ್ನು ಕೊಡುತ್ತೀಯಾ? ಕೋರಿಕೊಂಡ ಬಳಿಕ ನಿರಾಕರಿಸಬಾರದು' ಎಂದು ಹೇಳಿತು.

'ಒಪ್ಪಿಕೊಂಡ ಮೇಲೆ ನಿರಾಕರಿಸುವುದು ಧರ್ಮವಾಗುವುದಿಲ್ಲ. ಖಂಡಿತ ಕೊಡುತ್ತೇನೆ. ಇಷ್ಟಕ್ಕೂ ನೀವು ತಿನ್ನಲು ಒಳ್ಳೆಯ ಕಾಳು ಕೇಳಬಹುದು. ವಾಸ ಮಾಡಲು ನೆರಳು ಮತ್ತು ಹಣ್ಣು ಕೊಡುವ ಮರಗಳನ್ನು ಬಯಸಬಹುದು. ಇದರ ಹೊರತು ಹಕ್ಕಿಗಳಾದ ನಿಮಗೆ ಅನ್ಯ ಬಯಕೆಗಳು ಇರಲಾರದೆಂದು ಭಾವಿಸಿದ್ದೇನೆ. ಇನ್ನೇನು ಬೇಕೋ ನಿಸ್ಸಂಕೋಚವಾಗಿ ಕೇಳಿದರೆ ಕೊಡಲು ತಪ್ಪುವುದಿಲ್ಲ' ಎಂದು ದೊರೆ ಭರವಸೆ ನೀಡಿದ. ಆಗ ಹಕ್ಕಿಯು, 'ನೀನು ಯೋಚಿಸಿದ ಹಾಗೆ ನಮ್ಮ ಕೋರಿಕೆಗಳು ಸಣ್ಣದಲ್ಲ. ನಮಗೆ ಎಲ್ಲರಿಗೂ ನಿನ್ನ ಹಾಗೆ ತಲೆಯಲ್ಲಿ ಧರಿಸಲು ಚಿನ್ನದ ಕಿರೀಟಗಳನ್ನು ಮಾಡಿಸಿಕೊಡು. ನಿನ್ನ ಸಿಂಹಾಸನದ ಮೇಲೆ ಕುಳಿತು ರಾಜ್ಯವನ್ನು ಆಳಲು ಅನುಕೂಲವಾಗುವಂತೆ ನೀನು ಅಧಿಕಾರವನ್ನು ತ್ಯಾಗ ಮಾಡು' ಎಂದು ಕೇಳಿತು ಹಕ್ಕಿ.

ಹಕ್ಕಿಯ ಮಾತಿನಿಂದ ದೊರೆಗೆ ಅಸಮಾಧಾನವಾಗಲಿಲ್ಲ. ನಗುತ್ತ, 'ನಿನಗೆ ಯಾಕೆ ನನ್ನ ರಾಜನಾಗುವ ಆಶೆ ಬಂತು ಎಂದು ಕೇಳಬಹುದೆ?' ಎಂದು ಪ್ರಶ್ನಿಸಿದ. ಹಕ್ಕಿಯು, 'ನಿನ್ನ ರಾಜ್ಯದಲ್ಲಿ ತುಂಬ ಮಂದಿ ನಮಗೆ ವಿರೋಧಿಗಳಿದ್ದಾರೆ. ಅವರು ಆಹಾರಕ್ಕಾಗಿ ನಮ್ಮನ್ನು ಬೇಟೆಯಾಡಿ ವಂಶನಾಶಕ್ಕೆ ಕಾರಣರಾದರು. ನಮ್ಮ ಮೊಟ್ಟೆಗಳನ್ನು ಹುಡುಕಿ ತೆಗೆದು ನುಂಗಿದರು. ದೊರೆಯಾಗಿ ಅವರ ಕೃತ್ಯವನ್ನು ನೀನು ತಡೆಯಲಿಲ್ಲ. ಈಗ ನಾವು ರಾಜ್ಯದ ಆಡಳಿತ ವಹಿಸಿಕೊಂಡು ಅವರನ್ನು ದಂಡಿಸುವ ಕೆಲಸ ಮಾಡಬೇಕಾಗಿದೆ. ನಿನ್ನ ಸ್ಥಾನವನ್ನು ನಮಗೆ ಬಿಟ್ಟುಕೊಟ್ಟರೆ ಅವರಿಗೆಲ್ಲ ಪಾಠ ಕಲಿಸುತ್ತೇವೆ' ಎಂದು ಹೇಳಿತು ಹಕ್ಕಿ.

ದೊರೆ ನುಡಿದ ಹಾಗೆಯೇ ನಡೆದುಕೊಂಡ. ಹಕ್ಕಿಗಳನ್ನು ಅರಮನೆಗೆ ಕರೆದುಕೊಂಡು ಬಂದ. ವಜೀರರನ್ನು ಕರೆದ. 'ಈ ಎಲ್ಲ ಹಕ್ಕಿಗಳಿಗೂ ಅಕ್ಕಸಾಲಿಗರಿಂದ ಚಿನ್ನದ ಕಿರೀಟ ಮಾಡಿಸಿ ತೊಡಿಸಿಬಿಡಿ. ಈ ಗಳಿಗೆಯಿಂದ ನಾನು ದೇಶದ ಅರಸನಾಗಿರುವುದಿಲ್ಲ. ಈ ಹಕ್ಕಿಗಳ ರಾಜನೇ ಸಿಂಹಾಸನದ ಮೇಲೆ ಕುಳಿತು ಪ್ರಜೆಗಳನ್ನು ಪರಿಪಾಲನೆ ಮಾಡುತ್ತದೆ. ನೀವೆಲ್ಲರೂ ಈ ಕುರಿತು ನನ್ನನ್ನು ಏನೂ ಕೇಳಬಾರದು. ವಿಧೇಯರಾಗಿ ಆ ರಾಜನ ಆಜ್ಞೆಗಳನ್ನು ಪಾಲಿಸಬೇಕು' ಎಂದು ಹೇಳಿದ. ಎಲ್ಲ ಹಕ್ಕಿಗಳ ತಲೆಗೂ ಚಿನ್ನದ ಕಿರೀಟವನ್ನು ತೊಡಿಸಿದ. ದೊಡ್ಡ ಹಕ್ಕಿಯನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ರಾಜ್ಯಾಭಿಷೇಕ ಮಾಡಿದ.

ಬಳಿಕ ದೊರೆಯು ರಾಜನಾದ ಹಕ್ಕಿಯನ್ನು ಬಳಿಗೆ ಕರೆದು, 'ಇನ್ನು ಮುಂದೆ ನನ್ನ ಹಾಗೆಯೇ ಪ್ರಜೆಗಳನ್ನು ಪ್ರೀತಿಯಿಂದ ಪರಿಪಾಲಿಸುವ ಹೊಣೆ ನಿನ್ನ ಮೇಲಿದೆ. ಅಧಿಕಾರವೆಂಬುದು ಸುಲಭವಲ್ಲ, ಕತ್ತಿಯ ಮೇಲೆ ನಡೆದಾಡಿದ ಹಾಗೆ ಎಚ್ಚರಿಕೆಯಿಂದ ಇರಬೇಕು. ಎಂದಾದರೂ ನಿನಗೆ ಈ ಅಧಿಕಾರ ಬೇಡ, ಇದರಿಂದ ವಿಮೋಚನೆ ಬೇಕು ಎಂಬ ಭಾವನೆ ಮೂಡಿದರೆ ನನ್ನ ಬಳಿಗೆ ಬರಬೇಕು. ನಾನು ಇದೇ ನಗರದ ಪ್ರಾರ್ಥನಾ ಮಂದಿರದ ಮುಂದೆ ದೇವರ ಧ್ಯಾನ ಮಾಡುತ್ತ ಕುಳಿತಿರುತ್ತೇನೆ. ನಿನಗೆ ಬಂದಿರುವ ಸಮಸ್ಯೆಯನ್ನು ನಿವಾರಿಸುತ್ತೇನೆ' ಎಂದು ಹೇಳಿ ಸರಳವಾದ ಉಡುಪುಗಳನ್ನು ತೊಟ್ಟುಕೊಂಡು ಅರಮನೆಯಿಂದ ಹೊರಟುಹೋದ.

ರಾಜನಾಗಿ ಸಿಂಹಾಸನವೇರಿದ ಹಕ್ಕಿಯು ಸುಮ್ಮನಿರಲಿಲ್ಲ. ವಜೀರನನ್ನು ಕರೆದು, 'ಅರಮನೆಯ ಅಡುಗೆಯವನಾಗಿ ಹೊಸಬನೊಬ್ಬ ಸೇರಿಕೊಂಡಿದ್ದಾನೆ ತಾನೆ? ಅವನನ್ನು ಕೂಡಲೇ ಬಂಧಿಸಿ ಕತ್ತಲು ಕೋಣೆಗೆ ತಳ್ಳಿಬಿಡು' ಎಂದು ಆಜ್ಞಾಪಿಸಿತು. ವಜೀರನು ಅಚ್ಚರಿಯಿಂದ, 'ಅವನು